ಶ್ರೀ ಪಿ. ಜಿ. ಆರ್. ಸಿಂಧ್ಯ.—ಕರ್ನಾಟಕ ಆಂಟಿ ಬಯೊಟಿಕ್ ಕಾರ್ಖಾನೆಯಲ್ಲಿ ಈ ತಿಂಗಳಲ್ಲೇ ಟ್ರಯಲ್ ಪ್ರೊಡಕ್ಷನ್ ಬರಬೇಕಾಗಿತ್ತು. ಆದರೆ ಒಂದು ತಿಂಗಳಕಾಲ ತಡವಾಗಿದೆ. ಬಹುಶಃ ಅಕ್ಟೋಬರ್ ತಿಂಗಳಲ್ಲಿ ಇದು ಪ್ರಾರಂಭವಾಗಬಹುದು. ಈ ಕಾರ್ಖಾನೆ ಆದಷ್ಟುಬೇಗ ಅಸ್ತಿತ್ವಕ್ಕೆ ಬಂದು ಔಷಧಿಗಳ ತಯಾರಿಕಾ ಕಾರ್ಯ ಅತಿ ಶೀಘ್ರವಾಗಿ ಆಗುವಂತೆ ಸರ್ಕಾರದ ಪರವಿಯಿಂದ ನಾನೇನು ಪ್ರಯತ್ನಗಳನ್ನು ಮಾಡಬಹುದೋ ಅವೆಲ್ಲವನ್ನೂ ಮಾಡುತ್ತೇವೆಂದು ಈ ಸದನದ ಸದಸ್ಯರಿಗೆ ತಿಳಿಸ ಬಯಸುತ್ತೇನೆ.

ಶ್ರೀ ಪಿ. ರಾಮದೇವ್.—ಆಸ್ಪತ್ರೆಗಳಲ್ಲಿ ಔಷಧಿಗಳ ಸರಬರಾಜು ಮತ್ತು ವಿತರಣೆ ಸಂದರ್ಭದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಮತ್ತು ಕಾರಣದಿಂದ ಹಿಂದೆ ಕೆಲವು ನೌಕರರನ್ನು ಸಸ್ಪೆಂಡ್ ಮಾಡಿದರು ಅದು ವಿಚಾರಣೆಯಾಗುತ್ತಿದೆ. ಕೆ. ಸಿ. ಜಿ. ಆಸ್ಪತ್ರೆಯಲ್ಲಿ ಡ್ರಗ್ಸ್ ಸ್ಟೋರ್‌ಕೀಪರನ್ನು ಸಸ್ಪೆಂಡ್ ಮಾಡಿದ್ದರು. ಅಂದರೆ ಈಗಿರತಕ್ಕ ಪದ್ಧತಿಯಲ್ಲಿ ಭ್ರಷ್ಟಾಚಾರ ತುಂಬಿತುಳುಕಲು ಅವಕಾಶ ಇರುವುದರಿಂದ ಇದನ್ನು ಸರಿಪಡಿಸುವುದಕ್ಕೆ ಬೇರೆ ವಿಧಾನವನ್ನು ಏನಾದರೂ ಹುಡುಕುತ್ತಿರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಸ್ಪತ್ರೆಗಳಲ್ಲಿ ಔಷಧಿಗಳ ಸರಬರಾಜು ಮತ್ತು ವಿತರಣೆ ಸಂದರ್ಭದಲ್ಲಿ ಬಹಳಷ್ಟು ಅವ್ಯವಹಾರಗಳಾಗುತ್ತಿವೆ ಎಂದು ಕೇಳಿಬರುತ್ತಿದೆ. ಆದರೆ ಇದಕ್ಕೆ ಸಂಬಂಧ ಪಟ್ಟಂತೆ ಯಾವುದೇ ನಿರ್ದಿಷ್ಟ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಇದು ವಾಸ್ತವಾಂಶ ಇರಬಹುದು. ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆದ್ದರಿಂದಲೇ ಇದನ್ನು ಸರಿಪಡಿಸುವ ಸಲುವಾಗಿ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಿಂದ ಹಿಡಿದು ರೋಗಿಗಳಿಗೆ ಔಷಧಿಗಳ ವಿತರಣಾ ಹಂತದವರೆಗೂ ಪ್ರತಿಯೊಂದುಹಂತ ದಲ್ಲಿಯೂ ಕಂಪ್ಯೂಟರ್ ಪದ್ಧತಿಯನ್ನು ಆಯಂಕರಿಸಬೇಕೆಂದು ಈಗಾಗಲೇ ನಾನು ಹೇಳಿದ್ದೇನೆ. ಮತ್ತು ಸಾಧ್ಯವಾದರೆ ಸರ್ಕಾರೀ ಮೆಡಿಕಲ್ ಸ್ಟೋರ್ಸ್‌ನ್ನು ಳ ಡಿವಿಜನ್‌ನಲ್ಲೂ ಪ್ರಾರಂಭ ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿರುವುದಾಗಿ ನಾನು ಆಪತ್ತೇ ಹೇಳಿದ್ದೇನೆ ಈ ಬಗ್ಗೆ ಮಾನ್ಯ ಸದಸ್ಯರು ಸೂಕ್ತ ಸಲಹೆಗಳನ್ನು ಕೊಟ್ಟರೆ ಅದನ್ನು ನಾವು ಕಾರ್ಯಾಚರಣೆಗೆ ತರಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

೧೯೮೦-೮೧, ೧೯೮೧-೮೨ ಹಾಗೂ ೧೯೮೨-೮೩ನೇ ಸಾಲುಗಳಲ್ಲಿ ರಾಜ್ಯದಲ್ಲಿ ನೀಡಲಾದ ವೃದ್ಧಾಪ್ಯ ವೇತನಗಳ ಸಂಖ್ಯೆ.

೨೦೨. ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ) — ಮುಖ್ಯಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ,-

(ಅ) ರಾಜ್ಯದಲ್ಲಿ ೧೯೮೦-೮೧, ೧೯೮೧-೮೨ ಹಾಗೂ ೧೯೮೨-೮೩ ರಲ್ಲಿ ಎಷ್ಟು ಮಂದಿಗೆ ವೃದ್ಧಾಪ್ಯವೇತನ ಕೊಡಲಾಗಿದೆ ಮತ್ತು ಹಾಗೆ ಕೊಡಲಾದ ವೃದ್ಧಾಪ್ಯವೇತನದ ಒಟ್ಟು ಮೊತ್ತ ಎಷ್ಟು. (ಜಿಲ್ಲಾವಾರು ಮಾಹಿತಿ ಒದಗಿಸಬೇಕಾಗಿ ವಿನಂತಿ)

(ಆ) ಹಾಗಿದ್ದಲ್ಲಿ, ಸರಕಾರದವರು ವೃದ್ಧಾಪ್ಯವೇತನ ಬದಲು ಗಂಜಿ ಕೇಂದ್ರ ಮೂಲಕ ಬದಲಿ ವ್ಯವಸ್ಥೆ ಮಾಡುವರೇ ?

ಮಾನ್ಯ ಸದಸ್ಯರು ಹಾಜರಿಲ್ಲ

ವೃದ್ಧಾಪ್ಯವೇತನ ವಿತರಣೆ ಹಾಗೂ ಅದು ದುರಪಯೋಗವಾದಂತೆ ತಡೆಗಟ್ಟಲು ಕೈಗೊಂಡ ಕ್ರಮ

೨೦೩. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿ ಗಳು ದಯವಿಟ್ಟು ಉತ್ತರಿಸುವರೆ ?

ಅ) ಅಂಚೆಯ ಮೂಲಕ ಬಟವಾಡೆ ಮಾಡುತ್ತಿರುವ ವೃದ್ಧಾಪ್ಯ ವೇತನ ಮತ್ತು ಕುಂಗವಿಕಲರ ಮಾಸಾಸನವನ್ನು ನಕಲಿ ಜನರು ಪಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ವೃದ್ಧಾಪ್ಯ ವೇತನದಾರರು ಮೃತರಾದ ಬಳಿಕವೂ ಮೃತರ ಹೆಸರಿನಲ್ಲಿ ಬೇರೆಯವರು ವೃದ್ಯಾಪ್ಯ ವೇತನ ಪಡೆಯುತ್ತಿರುವುದು ನಿಜವೇ ?

ಇ) ಇದು ನಿಜವಾದಲ್ಲಿ ಇದನ್ನು ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ರಾಮಕೃಷ್ಣ ಹೆಗಡೆ.(ಮುಖ್ಯಮಂತ್ರಿಗಳು)—

ಅ) ಹೌದು

ಆ) ಕೆಲವೊಂದು ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆ.

ಇ) ವೃದ್ಧಾಪ್ಯ ವೇತನ ಮಂಜೂರು ಮಾಡುವ ಮುಂಚೆ ವಿಷಯಗಳ ಪರಿಶೀಲನೆ, ಮಂಜೂರಾದ ನಂತರ ಕಂದಾಯ ಇಲಾಖಾಧಿಕಾರಿಗಳಿಂದ ತನಿಖೆ ಮತ್ತು ವೃದ್ಧಾಪ್ಯ ವೇತನದಾರರಿಗೆ ಗುರುತಿನ ಚೀಟಿಯನ್ನು ಕೊಡಿಸುವುದರಿಂದ ಬೋಗಸ್ ಪ್ರಕರಣಗಳನ್ನು (ಇಂಪ್ಪರ್‌ಸೋನೆಷನ್) ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಗಂಗಣ್ಣ.—ಹಾಲಿ ಇರತಕ್ಕ ವ್ಯವಸ್ಥೆಯಿಂದ ಈ ಪ್ರಕರಣಗಳು ಇನ್ನೂ ಪೂರ್ತಿಯಾಗಿ ನಿಂತಿಲ್ಲ ಇದರ ಬಗ್ಗೆ ಸಮಗ್ರವಾದ ತನಿಖೆ ಮಾಡಿಸಿ ಸರ್ಕಾರ ವರದಿಯನ್ನು ತರಿಸಿ, ಸುಳ್ಳು ಮಾಹಿತಿಯನ್ನು ಒದಗಿಸಿ ಕೆಲವು ವ್ಯಕ್ತಿಗಳು ಹಣವನ್ನು ಏನು ತೆಗೆದುಕೊಳ್ಳುತ್ತಿದ್ದಾರೆ ಅವರನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಯನ್ನು ವಿಧಿಸುವ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ತಮ್ಮ ಸಲಹೆ ಸೂಕ್ತವಾಗಿದೆ. ಈಗಾಗಲೇ ನಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಈಗ ಇನ್ನೂ ಹೆಚ್ಚು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೂ ಪ್ರಯತ್ನ ಮಾಡುತ್ತೇವೆ, ಅರ್ಹತೆ ಇಲ್ಲದಿರುವವರು ಈ ಸೌಲಭ್ಯವನ್ನು ತೆಗೆದುಕೊಳ್ಳುವುದಾದರೆ ಅರ್ಹತೆ ಇರುವವರಿಗೆ ನಾವು ಅನ್ಯಾಯವನ್ನು ಮಾಡಿದಂತಾಗುತ್ತದೆ. ಆದ್ದರಿಂದ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ವೃದ್ಧಾಪ್ಯವೆ ತನ Impersonation ಮಾಡುತ್ತಾರೆ ಎಂದು ಹೇಳಿದಿರಿ. ಅನೇಕ ಜನರು ಬಡವರು ತಹಸೀಲ್ದಾರ್‌ರವರ ಕಛೇರಿಗೆ ಹೋದಾಗ ಅವರು ನೇರವಾಗಿ ಒಳಗಡೆ ಹೋಗುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಇದರಿಂದ ನಿಜವಾಗಿ ಯಾರು ಅರ್ಹರಿರುತ್ತಾರೆ ಅವರಿಗೆ ಈ ಸೌಲಭ್ಯ ಸಿಕ್ಕುವುದಿಲ್ಲ. ಆದ್ದರಿಂದ ಅವರಿಗೆ ಈ ಸೌಲಭ್ಯ ಸಿಕ್ಕುವಂತೆ ಏನಾದರೂ ಪ್ರಚಾರ ಕಾರ್ಯವನ್ನು ಕೈಗೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ತಹಸಿಲ್ದಾರ್‌ರವರ ಮುಖಾಂತರ ಹಣವನ್ನು ಕೊಡುವುದಿಲ್ಲ, ಅದನ್ನು ಮನಿಯಾರ್ಡರ್ ಮುಂಖಾತರ ಕಳುಹಿಸಿಕೊಡುತ್ತಿದ್ದೇವೆ, ಕೆಲವು ಸಂದರ್ಭದಲ್ಲಿ ಯಾರಿಗೆ ವೃದ್ಯಾಪ್ಯವೇತನ ಹೋಗಬೇಕೋ ಅವರು ತೀರಿಕೊಂಡ ಮೇಲೂ ಕೂಡ ಅವರ ಹೆಸರಿನಲ್ಲಿ ಬೇರೆಯವರು ಆ ಹಣವನ್ನು ತೆಗೆದುಕೊಂಡಿರುವ ಪ್ರಕರಣಗಳು ಬಹಳವಾಗಿ ಉಂಟು. ಹೊಸದಾಗಿ ವೃದ್ಧಾಪ್ಯವೇತನಕ್ಕಾಗಿ ತಹಸಿಲ್ದಾರ್‌ರವರ ಕಛೇರಿಗೆ ಹೋದಾಗ ಅವರು ನೇರವಾಗಿ ಒಳಗಡೆ ಹೋಗುವುದಕ್ಕೂ ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದೀರಿ ಎಂದು ನನಗನಿಸುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ತಹಸಿಲ್ದಾರ್‌ರವರು ಅಥವಾ ಬೇರೆ ಅಧಿಕಾರಿಗಳು ಹಳ್ಳಿಗಳಿಗೆ ಹೋದಾಗ ಅಲ್ಲಿ ಬೇರೆಯವರ ಅಭಿಪ್ರಾಯವನ್ನು ತಿಳಿದು ೬೦ ವರ್ಷಕ್ಕೆ ಮೀರಿದ ಜನರು ಇದ್ದರೆ ಅವರ ಹೆಸರುಗಳ ಒಂದು ಪಟ್ಟಿಯನ್ನು ಮಾಡಿಕೊಂಡು ಬರಬೇಕೆಂದು ನಮ್ಮ ನಿರ್ದೇಶನ ಇದೆ. ಇದರಂತೆ ಅಧಿಕಾರಿಗಳು ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೆ ಸಾರ್ವಜನಿಕರಿಂದ ಅಥವಾ ವಾಲಂಟರಿ ಆರ್ಗನೈಸೇಷನ್‌ನಿಂದ, ಅಥವಾ ಪಂಚಾಯಿತಿಗಳಿಂದ ಸೂಚನೆ ಬಂದರೆ ಅದನ್ನೂ ಕೂಡ ಅವರು ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ವೃದ್ಧಾಪ್ಯವೇತನವನ್ನು ಮನಿಯಾರ್ಡರ್ ಮುಖಾಂತರ ಕಳುಹಿಸುತ್ತಿರುವುದರಿಂದ ಅದನ್ನು ತೆಗೆದುಕೊಳ್ಳುವವರಿಗೂ ತೊಂದರೆಯಾಗುತ್ತಿದೆ ಮತ್ತು ಇದರಲ್ಲಿ ಕೆಲವು ಮೋಸ ಕೂಡ ನಡೆಯುತ್ತಿವೆ ಆದ್ದರಿಂದ ನಾನು ಹಿಂದೆ ಹೇಳಿದಂತೆ ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಫಲಾನುಭವಿಗಳ ಆಕೌಂಟ್‌ನ್ನು ತೆರೆಸಿ ಅದಕ್ಕೆ ಈ ಹಣವನ್ನು ತುಂಬಿ ನಂತರವೆ ವೃದ್ಧರು ಅದನ್ನು ತೆಗೆದುಕೊಳ್ಳಲು ಅನುಕೂಲವಾಗುವಂತಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ವಿಚಾರಗಳಲ್ಲಿ ನಾವು ಪೆಡ್ಯೂಲ್ಡ್ ಬ್ಯಾಂಕ್‌ನವರ ಸಹಾಯವನ್ನು ತೆಗೆದುಕೊಂಡಿದ್ದೇವೆ. ಈ ಕೆಲಸ ಬಹಳ ದೊಡ್ಡ ಸಂಸ್ಥೆಯಾಲ್ಲಿರುವುದರಿಂದ ಪೆಡ್ಯೂಲ್ಡ್ ಬ್ಯಾಂಕ್‌ನವರು ಇದನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ ಆದರೂ ನಾನು ಆಪರ ಜೊತೆ ಮಾತನಾಡುತ್ತೇನೆ ಪ್ರತಿಯೊಂದು ಹಳ್ಳಿಗೂ ಪ್ರತಿದಿನ ಇಲ್ಲವೇ ವಾರಕ್ಕೆ ಎರಡೆರಡು ಸಾರಿಯಾದರೂ ಪೋಸ್ಟ್‌ಮನ್‌ಗಳು ಹೋಗುವುದರಿಂದ ನಾವು ಮನಿಯರ್ಡಾರ್ ಮುಖಾಂತರ ಕಳುಹಿಸಿಕೊಡುತ್ತಿದ್ದೇವೆ. ಆದರೆ ಈ ಪೆಡ್ಯೂಲ್ಡ್ ಬ್ಯಾಂಕ್ ಮುಖಾಂತರ ಅಷ್ಟು ಸುಲಭವಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎ. ತಿಮ್ಮಯ್ಯ.—ಸ್ವಾಮಿ, ಕೆಲವು ತಂದೆ, ತಾಯಿಗಳ ತಮ್ಮ ಮಕ್ಕಳಿಗೆ ಮದುವೆ ಮಾಡಿದ ಮೇಲೆ ಅವರು ತಮಗೆ ಆನ್ನ ಹಾಕದೆ ಹೊರಗೆ ಕಳುಹಿಸಿದ್ದಾರೆಂದು ಸುಳ್ಳು ಸರ್ಟಿಫಿಕೇಟನ್ನು ಮಾಡಿಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮೂಡಿಗೆರೆ ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಇಂಥ ದೂರುಗಳು ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥ ಕೇಸುಗಳೂ ಇರಬಹುದು. ಇದರ ಬಗ್ಗೆ ಈಗಾಗಲೇ ಸಮಾಜ ಕಲ್ಯಾಣ ಖಾತೆ ಸಚಿವರು ಮತ್ತು ಅಧಿಕಾರಿಗಳು ಸೇರಿ ಒಂದು ಯೋಜನೆಯನ್ನು ಮಾಡುತ್ತಿದ್ದಾರೆ. ಯಾರು ನಿರ್ಗತಿಕರಾಗಿದ್ದು, ಪರಿತ್ಯಕ್ತರಾಗಿರುತ್ತಾರೆ, ಅವರನ್ನು ನೋಡಿಕೊಳ್ಳಲು ಸಂಬಂಧಿಕರಾಗಲಿ, ಅಥವಾ ಬೇರೆ ಯಾತ್ರೆಯೇ ಆಶ್ರಯವಾಗಲಿ ಇರುವುದಿಲ್ಲ ಅಂಥ ವೃದ್ಧರು ಮತ್ತು ವೃದ್ಧೆಯರಿಗೋಸ್ಕರ ಓಲ್ಡ್ ಪೀಪಲ್ಸ್ ಹೋಂ ಎನ್ನುವಂಥ ಯಾವುದಾದರೂ ಒಂದು ಹೆಸರನ್ನು ಇಟ್ಟು ಒಂದು ಆಶ್ರಮದ ರೀತಿಯಲ್ಲಿ ಮಾಡಬೇಕೆಂದು ಮಾಡುತ್ತಿದ್ದಾರೆ. ಅಂಥವರು ಅಲ್ಲಿಗೆ ಹೋದರೆ ಅವರಿಗೆ ಊಟ, ವಸತಿ ಕೊಟ್ಟು ಆರೈಕೆ ಮಾಡಬಹುದು.

ಒಬ್ಬ ಮಾನ್ಯ ಸದಸ್ಯರು.—ವೃದ್ಧಾಪ್ಯ ವೇತನವನ್ನು ಕೊಡಬೇಕಾದರೆ ಪೋಸ್ಟ್‌ಮೆನ್ ಕಮಿಷನ್ ಕೇಳುತ್ತಾನೆ, ಅವರು ಕೊಡದಿದ್ದರೆ, ಇನ್ನೊಂದು ಸಾರಿ ಇವರು ಊರಿನತ್ತಿಲ್ಲ ಎಂದು ಬರೆದು ಆ ಹಣವನ್ನು ವಾಪಸು ಕಳುಹಿಸಿಬಿಡುತ್ತಾನೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ವೃದ್ಧರಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ನಾವು ಎಂ. ಒ. ಮಾಡುತ್ತಿದ್ದೆವೆ. ನಾವು ಬೇರೆ ಯಾವ ವ್ಯವಸ್ಥೆ ಮಾಡಿದರೂ ಅದನ್ನು ಕೊಡುವಾಗ ಕಮಿಷನ್ ಕೇಳಬಹುದು. ಒಂದು ವೇಳೆ ಚೆಕ್‌ಮುಖಾಂತರ ಕೊಡುವಾಗ ಬ್ಯಾಂಕ್‌ನವರೂ ಕಮಿಷನ್ ಕೇಳಬಹುದು. ಆದ್ದರಿಂದ ಇದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ರಾಮದೇವ್.—ಸತ್ತವರ ಹೆಸರಿನಲ್ಲೂ ಪೆನ್‌ಷನ್ ಹೋಗುತ್ತಿದೆ ಎಂದು ತಾವು ಹೇಳಿದಿರಿ. ಪೆನ್‌ಷನ್‌ದಾರರು ಕೊಡುವಂತೆ ಈ ವೃದ್ಧಾಪ್ಯ ವೇತನವನ್ನು ತೆಗೆದುಕೊಳ್ಳುವವರೂ ೩ ತಿಂಗಳಿಗೆ, ೬ ತಿಂಗಳಿಗೆ ಲೈಫ್ ಸರ್ಟಿಫಿಕೇಟ್‌ನ್ನು ಕೊಡುವ ಒಂದು ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಪರ್ಯಾಲೋಚನೆ ಮಾಡುತ್ತೇನೆ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಮಾನ್ಯ ಅಧ್ಯಕ್ಷರೇ ಈಗ ಗಂಗಾರಾಮ್ ಕಟ್ಟಡ ಬಿದ್ದು ಹಲವಾರು ಜನ ತೀರಿಕೊಂಡಿದ್ದಾರೆ. ಗಂಡ ತೀರಿಕೊಂಡಿದ್ದರೆ ಅಂಥವರ ವಿಧವೆಯರಿಗೂ ಪೆನ್‌ಷನ್ ಸಿಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ನಾನು ಈಗಾಗಲೇ ಪತ್ರದ ಮುಖಾಂತರ ಅರಿಕೆ ಮಾಡಿಕೊಂಡಿದ್ದೆ. ಆದ್ದರಿಂದ ತಮ್ಮ ಕಾಲದಲ್ಲಿ ಇದನ್ನು ಮಾಡಿದರೆ ಅನುಕೂಲವಾಗುತ್ತದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅಂಥ ಡಿಸರ್ವಿಂಗ್ ಕೇಸಷ್ಟನಲ್ಲಿ ಇಲ್ಲ ಎಂದು ಹೇಳುವುದಿಲ್ಲ. ಆದರೆ ಏನಾಗುತ್ತದೆ ಎಂದರೆ ಎಂಥ ಸಂದರ್ಭದಲ್ಲಿ ವಿಧವೆಯರಿಗೆ ಕೊಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಗಂಗಾರಾಮ್ ಕಟ್ಟಡ ಬಿದ್ದು ಹೋಯಿತು ಎನ್ನುವುದರ ಕೇಸ್ ಸೀಮಿತವಾಗಿರುತ್ತದೆ. ಅವರಿಗೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಮಾಹಿತಿಯ ಸೌಲಭ್ಯ ಸಿಗುತ್ತದೆಂದು ವಿಧವೆಯರೆಲ್ಲರೂ ಸಹ ಕೇಳುವುದಾದರೆ ಅದರಿಂದ ತೊಂದರೆ ಉಂಟಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಅವರಿಗೆ ಬರತಕ್ಕಂಥ ವಾರ್ಷಿಕ ಆದಾಯವನ್ನು ಮೂಲಾಧಾರವಾಗಿ ಇಟ್ಟುಕೊಂಡು ಪೆನ್‌ಷನ್ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಆಧಾರವಾಗಿ ಇಟ್ಟುಕೊಂಡು ಮಾಡಬೇಕೆಂದರೆ ಸ್ವಲ್ಪ ಕಷ್ಟವೆಂದು ಕಾಣುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಬೆಂಗಳೂರು ನಗರದಲ್ಲಿ ವಿದ್ಯಾರ್ಥಿವೇತನ ಸಿಕ್ಕದೆ ಇರತಕ್ಕಂಥ ಸಂದರ್ಭಗಳಲ್ಲಿ ಬಡಜನರು ಬಂದು ಶಾಸಕರನ್ನು ಪೀಡಿಸುತ್ತಿರುತ್ತಾರೆ. ಇದಕ್ಕೆ ಕಾರಣ ವೇನೆಂದರೆ ಈಗಾಗಲೇ ಬೆಂಗಳೂರು ಸೌತ್ ತಾಲೂಕ್ ತಹಸೀಲ್‌ದಾರರು ಕೂಡ ಸಸ್‌ಪೆಂಡ್ ಆಗಿದ್ದಾರೆ. ಸಂಜೆಹೊತ್ತು ವಿದ್ಯಾರ್ಥಿಗಳನ್ನು ಬರಹೇಳತಕ್ಕಂಥದ್ದು. ಅವರಿಗೆ ಹಣವನ್ನು ಮನಿಯಾರ್ಡರ್ ಮಾಡದೆ ದುಡ್ಡನ್ನು ತೆಗೆದುಕೊಂಡು ಬಟವಾಡೆ ಮಾಡತಕ್ಕಂಥ ಕಾರ್ಯಕ್ರಮ ನಡೆಯುತ್ತಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಬ್ಯಾಂಕ್ ಮೂಲಕ ಹಣವನ್ನು ಕೊಡತಕ್ಕಂಥ ರೀತಿಯಲ್ಲಿ ಮಾಡಿದರೆ ವಿದ್ಯಾರ್ಥಿಗಳಿಗೆ ದುಡ್ಡು ಕೈಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ —ಈಗ ಬೆಂಗಳೂರು ನಾರ್ತ್‌ನಲ್ಲಿ ಬ್ಯಾಂಕ್ ಮುಖಾಂತರ ಮಾಡಬೇಕು ಎಂದರೆ ಮಾಡಬಹುದು. ಆದರೆ ದೂರ ದೂರದಲ್ಲಿರತಕ್ಕಂಥ ಹಳ್ಳಿಗಳಲ್ಲಿ ಬ್ಯಾಂಕ್ ಮುಖಾಂತರ ಕೊಡಬೇಕೆಂದು ಬ್ಯಾಂಕ್‌ಗಳು ಇರುವುದಿಲ್ಲ. ಶಹರ್‌ಗಳಲ್ಲಿ ಬ್ಯಾಂಕ್ ಮುಖಾಂತರ ಕೊಡಲು ಯೋಚನೆ ಮಾಡೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ಮಾನ್ಯ ಅಧ್ಯಕ್ಷರೇ ಮಾನ್ಯ ರಾಮ್‌ದೇವ್‌ರವರು ಹೇಳಿದ ಹಾಗೆ ಆರು ತಿಂಗಳಿಗೆ ಒಮ್ಮೆ ರಿನ್ಯೂವಲ್ ಮಾಡಬೇಕೆಂದರೆ ಅನೇಕ ಜನರಿಗೆ ಬಹಳ ತೊಂದರೆಯಾಗುತ್ತದೆ. ಅಧಿಕಾರಿಗಳು ಯಾವಾಗ ಸಿಕ್ಕುತ್ತಾರೆಂದು ಕಾಯಬೇಕಾಗುತ್ತದೆ. ಹಾಗೆ ಕಾದು ರಿನ್ಯೂವಲ್ ಮಾಡಿಸಿಕೊಂಡು ಬಂದರೆ ಮತ್ತೆ ೬ ತಿಂಗಳು ಆದ ಮೇಲೆ ಹೋಗಬೇಕಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ರೆವೆನ್ಯೂ ಇನ್ಸ್‌ಪೆಕ್ಟರ್ ಅವರೇ ಹೋಗಿ ವೆರಿಫೈ ಮಾಡಿ ತಹಸೀಲ್‌ದಾರರಿಗೆ ರಿಪೋರ್ಟ್ ಮಾಡತಕ್ಕಂಥದ್ದು ಬಹಳ ಸೂಕ್ತವೇ ಹೊರತು ೬ ತಿಂಗಳಿಗೊಮ್ಮೆ ರಿನ್ಯೂವಲ್ ಮಾಡಿಸಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಲೋಚನೆ ಮಾಡುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಿಂದ ತೊಂದರೆಯಾಗುವುದಾದರೆ ಬದಲಾವಣೆ ಮಾಡುವುದರಲ್ಲಿ ಏನು ಅಭ್ಯಂತರವಿಲ್ಲ. ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ಪ್ರತಿಯೊಬ್ಬ ಅರ್ಹತೆ ಇರತಕ್ಕಂಥ ವೃದ್ಧನಿಗೆ ನಾವು ಐಡೆಂಟಿಟ್ ಕಾರ್ಡನ್ನು ಕೊಡುತ್ತಿದ್ದೇವೆ. ಆ ಐಡೆಂಟಿಟಿ ಕಾರ್ಡನ್ನು ತಿಂಗಳಿಗೋ ೫–೬ ತಿಂಗಳಿಗೋ ಒಮ್ಮೆ ಸಬ್ ಟ್ರೆಜರಿಗೆ ಹೋಗಿ ತೋರಿಸಿ ಅದರ ಆಧಾರದ ಮೇಲೆ ದುಡ್ಡನ್ನು ತೆಗೆದುಕೊಳ್ಳಬಹುದು. ಆದರೆ ನನ್ನ ಅನುಭವ ಏನೆಂದರೆ ಅಲ್ಲೂ ಕೂಡ ಸ್ವಲ್ಪ ಕಮೀಷನ್ ಕೇಳಿದರೆ ೧೦೦ಕ್ಕೆ ೫೦ ರೂಪಾಯಿಗಳೂ ಸಿಕ್ಕುವುದಿಲ್ಲ. ಆದಕ್ಕಾಗಿ ಮನಿಯಾರ್ಡರ್ ಮುಖಾಂತರ ಹಣ ಕಳುಹಿಸಿ ಕೊಡುವಂತೆ ಮಾಡಿದ್ದೇವೆ. 'ಮನಿಯಾರ್ಡರ್ ಮುಖಾಂತರ ಕಳುಹಿಸುತ್ತಿರುವುದು ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಎಲ್ಲಕ್ಕಿಂತಲೂ ಬಹಳ ಉತ್ತಮವಾಗಿರುತ್ತದೆ. ಮನಿಯಾರ್ಡರ್ ಕೊಡುವಾಗಲೂ ಬಕ್ಷೀಸ್ ಕೇಳಿದರೆ ಕೆಲವರು ಒಂದು ರೂಪಾಯಿ ಎರಡು ರೂಪಾಯಿ ಕೊಡಬಹುದು ಅದು ಕಮೀಷನ್ ಆಗುವುದಿಲ್ಲ ' ಒಂದು ವೇಳೆ ಅವರಿಂ ಕಮಿಷನ್ ಎಂದು ಕೇಳಿದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೇಂದ್ರ ಸರ್ಕಾರಕ್ಕೆ ಬರೆದು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ

ಶ್ರೀ ಜಿ. ನಾರಾಯಣಕುಮಾರ್.—ವೃದ್ಧಾಪ್ಯ ವೇತನದ ಬಗ್ಗೆ ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ ಈ ವೃದ್ಧಾಪ್ಯ ವೇತನವನ್ನು ಕೊಡುವಾಗ ಕಂದಾಯ ಇಲಾಖೆಯ ಅಧಿಕಾರಿಗಳಿಗೂ ಮತ್ತು ತೆಗೆದುಕೊಳ್ಳುವವರಿಗೂ ಮಧ್ಯೆ ಒಬ್ಬ ಕಮೀಷನ್ ಏಜೆಂಟ್ ಇರುತ್ತಾರೆ ವೃದ್ಧಾಪ್ಯ ವಯಸ್ಸಿನಲ್ಲಿರದಿದ್ದವರಿಗೂ, ಮತ್ತು ಬಾಡಿಗೆ ಮುಂತಾದ ಆದಾಯ ಬರತಕ್ಕಂಥವರಿಗೂ ಈ ಏಜೆಂಟರು ಬರತಕ್ಕಂಥ ಆದಾಯದಲ್ಲಿ ಇಂತಿಷ್ಟು ಆದಾಯವನ್ನು ಕೊಡಬೇಕೆಂದು ಸಂದಾನ ಮಾಡಿಕೊಂಡು ತೆಗೆದುಕೊಳ್ಳುತ್ತಿರುತ್ತಾರೆ. ಈ ಸಂದಾನದ ನೆಪದಲ್ಲಿ ವೃದ್ಧಾಪ್ಯ ವಯಸ್ಸು ಆಗದವರಿಗೂ ವೃದ್ಧಾಪ್ಯ

ವೇತನ ಸಿಕ್ಕುತ್ತಿದೆ. ಆದ್ದರಿಂದ ಇದನ್ನು ಸರಿಯಾದ ರೀತಿಯಲ್ಲಿ ತನಿಖೆ ನಡೆಸಿ ಕಂದಾಯ ಇಲಾಖೆ ಯವರು ಈ ಪಜೆನ್ಸಿ ಜೊತೆಗೆ ಶಾಮೀಲಾಗಿರುವುದನ್ನು ತಪ್ಪಿಸಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಟ್ರಜರಿಯವರಿಗೆ ೬ ತಿಂಗಳಿಗೆ ಒಮ್ಮೆ ಅವರು ಬದುಕಿರುವುದಕ್ಕೆ ಸರ್ಟಿಫಿಕೇಟನ್ನು ತೋರಿಸ ಬೇಕಾಗಿರುತ್ತದೆ. ಈ ನೀತಿ ಏನು ಇದೆ ಇದನ್ನು ತಪ್ಪಿಸಬೇಕು. ಬ್ಯಾಂಕ್ ವೆಗೈರೆ ಮುಖಾಂತರ ಹಣವನ್ನು ತೆಗೆದುಕೊಳ್ಳಲು ವ್ಯವಸ್ಥೆಯನ್ನು ಮಾಡಬೇಕೆಂದು ಅನೇಕ ಜನ ಮಾನ್ಯ ಸದಸ್ಯರು ಹೇಳಿರು ತ್ತಾರೆ ಟ್ರಜರಿಯಿಂದ ಚೆಕ್ಕನ್ನು ಪಡೆದು ಬ್ಯಾಂಕ್‌ನಲ್ಲಿ ಹಣವನ್ನು ಪಡೆಯಲು ಹೋದರೆ ಅಲ್ಲೂ ಸಹ ಮಧ್ಯವರ್ತಿ ಜನರಿಗೆ ಅವಕಾಶವಾಗುತ್ತದೆ. ಆದ್ದರಿಂದ ಅಂಚೆಯ ಮುಖಾಂತರವೇ ವೃದ್ಧಾಪ್ಯ ವೇತನವನ್ನು ಕಳುಹಿಸಲು ನಮ್ಮ ಸರ್ಕಾರದವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಸದಸ್ಯರು ಕೊಟ್ಟಂತಹ ಸೂಚನೆಯನ್ನು ಗಮನಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ —ಈಗ ಟ್ರಜರಿ ಸಿಸ್ಟಮ್ ಮಾಡಿರುವುದರಿಂದ ಒಂದು ರೀತಿ ಒಳ್ಳೆಯದಿದ್ದರೂ ಈ ಟ್ರಜರಿ ಕ್ಯಾಷಿಯರ್‌ರವರನ್ನು ವರ್ಗಾವಣೆ ಮಾಡುವುದರಿಂದ ಬಿಡಿಂಟಟಿ ಮಾಡಬೇಕಾದ ಸಂದರ್ಭ ಗಳು ಬಂದಾಗ ಜನರಿಗೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಕ್ಯಾಷಿಯರ್‌ರವರನ್ನು ವರ್ಗಾವಣೆ ಮಾಡತಕ್ಕಂಥ ವಿಷಯದಲ್ಲಿ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು. —ಒಳ್ಳೆಯ ಸಲಹೆ.

ಶ್ರೀ ದೊಡ್ಡ ಬೋರೇಗೌಡ. —ನಮ್ಮ ತಾಲ್ಲೂಕಿನಲ್ಲಿ ಪೋಸ್ಟ್ ಮ್ಯಾನ್ ಏನು ಮಾಡುತ್ತಾನೆಂದರೆ ಬಕ್ಷೀಸ್ ಕೊಡದೇ ಹೋದರೆ ಆತನು ಸತ್ತೇಹೋಗಿದ್ದಾನೆಂದು ಸರ್ಟಿಫೈ ಮಾಡಿ ವಾಪಸ್ ಕಳುಹಿಸಿ ಕೊಟ್ಟುಬಿಡುತ್ತಾರೆ. ಮತ್ತೆ ಈ ತಾಲ್ಲೂಕಿನಲ್ಲಿ ತೆಗೆದುಕೊಳ್ಳಿ ಎಂದು ಹೇಳುವುದು ಇಲ್ಲವೇ ರಾಮನಗರದ ತಾಲ್ಲೂಕಿನವರಿಗೆ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ತೆಗೆದುಕೊಳ್ಳಿ ಎಂದು ಹೇಳತಕ್ಕಂಥ ನಿದರ್ಶನ ಗಳು ಇರುತ್ತವೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. —ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಕೊಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್. —ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸುವುದನ್ನು ಖಿಏನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ,

ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಯೋಜನೆಯ ಬಗ್ಗೆ

೧೬೫. ಶ್ರೀ ಬಿ. ಆರ್. ಯಾವಗಲ್ (ನರಗುಂದ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬರಿಗಾಲ ಪೈದ್ಯರ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಯೋಜನೆಯನ್ನು ೧೯೭೮ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದದ್ದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈಗ ಇದನ್ನು ಕೈಬಿಡಲು ಕಾರಣವೇನು ?

ಇ) ಈ ಮಾರ್ಗದರ್ಶಿಗಳಿಗೆ ಎಷ್ಟು ಸಂಬಳ ಕೊಡಲಾಗುತ್ತಿದೆ. ಹಾಗೂ ಔಷಧಿಗಳ ಪೂರೈಕೆ ಎಷ್ಟು ಮಾಡಲಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು)

ಅ) ಹೌದು.